# ರಾಷ್ಟ್ರೀಯ ಪೋಷಣಾ ಅಭಿಯಾನ



**ಶಶಿಕುಮಾರ್ ಬಿ.ಎಸ್.** ಸ.ಶಿ, ಸ.ಪ್ರೌ.ಶಾ, ಎಲೆಕ್ಯಾತನಹಳ್ಳಿ, ನೆಲಮಂಗಲ ತಾ. ಬೆಂ. ಗ್ರಾ, ಜಿ.

ಸೆಪ್ಟೆಂಬರ್–2021 ತಿಂಗಳಿನಲ್ಲಿ ನಾವೆಲ್ಲರೂ ನಮ್ಮ ನಮ್ಮ ಶಾಲೆಗಳಲ್ಲಿ ವಿದ್ಯಾರ್ಥಿಗಳೊಂದಿಗೆ ಪೋಷಣಾ ಅಭಿಯಾನ ಕಾರ್ಯಕ್ರಮವನ್ನು ಆಚರಿಸಿದ್ದೇವೆ. ಆದರೆ ಈ ಪೋಷಣಾ ಅಭಿಯಾನ ಕಾರ್ಯಕ್ರಮವು ಕೇವಲ ಸೆಪ್ಟೆಂಬರ್ ಮಾಸಕ್ಕೆ ಮಾತ್ರ ಸೀಮಿತವಾಗದೆ ನಿರಂತರವಾಗಿ ಶಾಲಾ ಹಂತದಲ್ಲಿ ಕಾಯ್ದುಕೊಳ್ಳುವಂತೆ ಜಾಗೃತಿ ಮೂಡಿಸುವುದು ಈ ಲೇಖನದ ಉದ್ದೇಶ.

ಅಪೌಷ್ಠಿಕತೆಯು ಎಲ್ಲಾ ವಯೋಮಾನದವರಲ್ಲಿ ಆರೋಗ್ಯದ ನಷ್ಟದ ಪ್ರಮುಖ ಅಪಾಯಕಾರಿ ಅಂಶವಾಗಿದ್ದು, ಸಂಗ್ರಹಿಸಿದ ಮಾಹಿತಿಯ ಪ್ರಕಾರ 2017ರಲ್ಲಿ ಭಾರತದ ಪ್ರತಿ ರಾಜ್ಯದಲ್ಲಿ 5ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಸಾವಿಗೆ ಅಪೌಷ್ಠಿಕತೆಯು ಪ್ರಧಾನವಾದ ಅಪಾಯಕಾರಿ ಅಂಶ ಎಂದು ತಿಳಿದು ಬಂದಿದೆ. 5 ವರ್ಷದೊಳಗಿನ ಮಕ್ಕಳ ಸಾವಿನಲ್ಲಿ 68.2%ರಷ್ಟಿದೆ. ಅಪೌಷ್ಠಿಕತೆಯು ಹೀಗೆ ಮುಂದುವರಿದರೆ 2022ರ ಸುಮಾರಿಗೆ 700,000 ಸಾವುಗಳಿಗೆ ಕಾರಣವಾಗುತ್ತದೆ ಎಂದು ಅಂದಾಜಿಸಲಾಗಿದೆ.

**ಪೋಷಣಾ ಅಭಿಯಾನದ ಮಹತ್ವ:**

ಪೋಷಣಾ ಅಭಿಯಾನವು (ರಾಷ್ಟ್ರೀಯ ಪೋಷಣೆ ಮಿಷನ್) ಭಾರತ ಸರ್ಕಾರದ ಅತ್ಯಂತ ಪ್ರಮುಖ ಕಾರ್ಯಕ್ರಮವಾಗಿದ್ದು ಇದು 0–6 ವರ್ಷ ವಯಸ್ಸಿನ ಮಕ್ಕಳು, ಹದಿಹರೆಯದ ಹುಡುಗಿಯರು, ಗರ್ಭಿಣಿ ಮಹಿಳೆಯರು ಮತ್ತು ಹಾಲುಣಿಸುವ ತಾಯಂದಿರ ಪೌಷ್ಠಿಕಾಂಶದ ಸ್ಥಿತಿಯನ್ನು ಸಮಯಕ್ಕೆ ಅನುಗುಣವಾಗಿ ಸುಧಾರಿಸುವ ಗುರಿಯನ್ನು ಹೊಂದಿದೆ. ಅಂಗನವಾಡಿ ಸೇವೆಗಳು, ಪ್ರಧಾನಮಂತ್ರಿ ಮಾತೃವಂದನಾ ಯೋಜನೆ, ಜನನಿ ಸುರಕ್ಷಾ ಯೋಜನೆ, ರಾಷ್ಟ್ರೀಯ ಆರೋಗ್ಯ ಮಿಷನ್, ಸ್ವಚ್ಛ–ಭಾರತ್ ಮಿಷನ್, ಸಾರ್ವಜನಿಕ ವಿತರಣಾ ವ್ಯವಸ್ಥೆ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗಳ ಮೂಲಕ ವಿವಿಧ ಕಾರ್ಯಕ್ರಮಗಳೊಂದಿಗೆ ಒಮ್ಮುಖ ಸಾಧಿಸುವ ಗುರಿಯನ್ನು ಈ ಅಭಿಯಾನ ಹೊಂದಿದೆ.

ರಾಷ್ಟ್ರೀಯ ಪೋಷಣೆ ಮಿಷನ್ ಅಡಿಯಲ್ಲಿ ನಗದು ವರ್ಗಾವಣೆಯ ಮೂಲಕ ಮಹಿಳೆಯರು ಮತ್ತು ಹದಿಹರೆಯದವರಲ್ಲಿ ಪೌಷ್ಠಿಕಾಂಶದ ಕೊರತೆ ಮತ್ತು ರಕ್ತಹೀನತೆಯನ್ನು ಕಡಿಮೆ ಮಾಡಲು ಇದು ಸಹಕಾರಿಯಾಗಿದೆ ಮತ್ತು ಕುಟುಂಬದ ಆದಾಯಕ್ಕೆ ಹೆಚ್ಚುವರಿ ಬೆಂಬಲವಾಗಿದೆ. ಹೆಚ್ಚಿನ ತಂತ್ರಜ್ಞಾನದ ಬಳಕೆಯ ಮೂಲಕ ಸೇವಾ ವಿತರಣೆಯನ್ನು ಖಚಿತಪಡಿಸಿಕೊಳ್ಳುವುದರ ಜೊತೆಗೆ ಪ್ರೋತ್ಸಾಹದ ಮೂಲಕ ಹಂತ ಹಂತವಾಗಿ ಬದಲಾವಣೆ ಸಾಧಿಸಬೇಕಾದ ನಿರ್ದಿಷ್ಟ ಗುರಿಗಳನ್ನು ಪಟ್ಟಿ ಮಾಡುತ್ತದೆ. ಹೀಗಾಗಿ ದೇಶದ ಅಪೌಷ್ಠಿಕತೆಯನ್ನು ನಿರ್ಮೂಲನೆ ಮಾಡುವ ಗುರಿಯೊಂದಿಗೆ ಒಂದು ಬೃಹತ್ ಹೆಜ್ಜೆಯಾಗಿದೆ.

**ಭಾರತದಲ್ಲಿ ಅಪೌಷ್ಠಿಕತೆಯನ್ನು ನಿಭಾಯಿಸಲು ಕ್ರಮಗಳು:**

ಭಾರತದಲ್ಲಿ ಗರ್ಭಿಣಿ ಮತ್ತು ಹಾಲುಣಿಸುವ ತಾಯಂದಿರಿಗೆ ಸಾಕಷ್ಟು ಪೌಷ್ಠಿಕಾಂಶವನ್ನು ಒದಗಿಸುವುದು ಪ್ರಥಮ ಆದ್ಯತೆಯಾಗಬೇಕಿದೆ. ಇದರಿಂದ ಮಗು ಸ್ವಯಂ ಅಪೌಷ್ಠಿಕತೆಯ ಅಪಾಯವನ್ನು ಎದುರಿಸುತ್ತದೆ. ನಗರ ಪ್ರದೇಶದಲ್ಲಿ ಬುಡಕಟ್ಟು ವಲಸೆ ಕಾರ್ಮಿಕರು ಕೆಲಸದ ಒತ್ತಡದ ಪರಿಸ್ಥಿತಿಗಳಿಂದ ಅನಾರೋಗ್ಯದ ಅಪಾಯಗಳಿಗೆ ಒಳಗಾಗುತ್ತಿದ್ದಾರೆ. ಈ ನಿಟ್ಟಿನಲ್ಲಿ ಈ ಜನಸಂಖ್ಯೆ ಹೆಚ್ಚು ಇರುವ ಸ್ಥಳಗಳಲ್ಲಿ ಉತ್ತಮ ಸಾರ್ವಜನಿಕ ಆರೋಗ್ಯದ ಸೌಲಭ್ಯಗಳನ್ನು ಒದಗಿಸುವುದು ಮುಖ್ಯವಾಗಿದೆ.



ರಿಸುವಂತೆ ಆದೇಶಿಸಿದೆ. ಆ ಪ್ರಕಾರವಾಗಿ ಅನೇಕ ಶಾಲೆಗಳು ವಿವಿಧ ಕಾರ್ಯಕ್ರಮವನ್ನು ಹಮ್ಮಿಕೊಂಡಿವೆ. ಈ ಪೋಷಣಾ ಅಭಿಯಾನವನ್ನು ಕೇವಲ ಇಲಾಖೆಯ ಆದೇಶಕ್ಕಾಗಿ ಮಾತ್ರ ಮಾಡದೇ, ಮಕ್ಕಳ ದೈಹಿಕ ಮತ್ತು ಮಾನಸಿಕ ಅಭಿವೃದ್ಧಿಗಾಗಿ ನಾವೆಲ್ಲರೂ ಈ ಕೆಳಗಿನ ಕೆಲವು ಅಂಶಗಳನ್ನು ಪ್ರತಿನಿತ್ಯ ಆಚರಿಸೋಣ.

- ತರಗತಿಯಲ್ಲಿ ಆಹಾರ ಮತ್ತು ಆಹಾರದ ಘಟಕಗಳ ಪ್ರಾಮುಖ್ಯತೆ ತಿಳಿಸುವುದು. ಯಾವ ವಿಧವಾದ ಆಹಾರವು ನಮ್ಮ ದೇಹಕ್ಕೆ ಏಕೆ ಪ್ರಮುಖವಾಗಿದೆ ಎಂಬ ಅರಿವು ಮೂಡಿಸುವುದು.
- ಮಧ್ಯಾಹ್ನದ ಬಿಸಿಯೂಟದ ಸಮಯದಲ್ಲಿ ಬಳಸುವ ಆಹಾರದ ಘಟಕಗಳಲ್ಲಿನ ಕನಿಷ್ಠ ಪೋಷಕಾಂಶಗಳ ಪರಿಚಯ ಮಾಡಿಸುವುದು.
- ವಿವಿಧ ತರಕಾರಿಗಳಿಂದ ದೊರೆಯುವ ಪೋಷಕಾಂಶಗಳ ಪಟ್ಟಿ ತಯಾರಿಸಿ ಪ್ರದರ್ಶಿಸುವುದು. ಪ್ರತಿಯೊಬ್ಬ ವಿದ್ಯಾರ್ಥಿಯು ಒಂದೊಂದು ತರಕಾರಿ/ ಆಹಾರ ವಸ್ತುವನ್ನು ತೆಗೆದುಕೊಂಡು ಬರುವುದರೊಂದಿಗೆ ಅದರ ಮಾಹಿತಿ ಸಂಗ್ರಹಿಸಿ, ತರಗತಿಯಲ್ಲಿ ಪ್ರದರ್ಶಿಸುತ್ತಾ ಅದರ ಪ್ರಾಮುಖ್ಯತೆಯನ್ನು ಹೇಳುವುದು.
- ಆಹಾರದ ಘಟಕಗಳ ಬಳಸಿ ವಿವಿಧ ಮಾದರಿಗಳು, ರಂಗೋಲಿ ಸ್ಪರ್ಧೆ, ದೇಹದ ವಿವಿಧ ಅಂಗಗಳ ಚಿತ್ರಣ ಸ್ಪರ್ಧೆ ಹಾಗು ಆಹಾರದ ಪ್ರಾಮುಖ್ಯತೆ, ಅವುಗಳ ನ್ಯೂನತೆಯಿಂದ ಉಂಟಾಗುವ ರೋಗಗಳ ರಸಪ್ರಶ್ನೆ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳಿಗೆ ಏರ್ಪಡಿಸುವುದು.
- ಶಾಲೆಗೆ ಹತ್ತಿರವಿರುವ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರಿಂದ ಅಪೌಷ್ಠಿಕತೆಯಿಂದಾಗುವ ತೊಂದರೆ ಮತ್ತು ಸಮತೋಲನ ಆಹಾರದ ಪ್ರಾಮುಖ್ಯತೆ ಕುರಿತಾದ ವಿಚಾರ ಸಂಕೀರ್ಣವನ್ನು ಏರ್ಪಡಿಸುವುದು.

ಇಂಥ ವಿನೂತನ ಚಟುವಟಿಕೆಗಳನ್ನು ಶಾಲೆಗಳಲ್ಲಿ ನಡೆಸುವುದರ ಮೂಲಕ ಅಪೌಷ್ಠಿಕತೆಯನ್ನು ಹೋಗಲಾಡಿಸುವಲ್ಲಿ ನಾವೆಲ್ಲರೂ ಪ್ರಯತ್ನಿಸೋಣ. ಇದರೊಂದಿಗೆ ಮಧ್ಯಾಹ್ನದ ಬಿಸಿಯೂಟ ಯೋಜನೆಯಿಂದ ಆಗುವ ಅನುಕೂಲಗಳ ಬಗ್ಗೆ ಪೋಷಕರಿಗೆ ಅರ್ಥೈಸುವ ಪ್ರಯತ್ನ ಮಾಡುವುದರೊಂದಿಗೆ ಪೌಷ್ಠಿಕ ಆಹಾರ, ಸಮತೋಲನ ಆಹಾರ, ಶುದ್ಧನೀರು, ವ್ಯಾಯಾಮ, ಯೋಗ, ಆಟಗಳನ್ನು ಆಡುವ ಪ್ರಾಮುಖ್ಯತೆಯನ್ನು ಮಕ್ಕಳಿಗೆ ಶಾಲಾಹಂತದಲ್ಲಿ ತಿಳಿಸಿದರೆ, ಸರ್ಕಾರದ ಪ್ರಯತ್ನ ನಿಜವಾಗಿಯೂ ಸಾಕಾರಗೊಳ್ಳಲಿದೆ.

ಆರ್ಥಿಕ
ವ ್ ು ತ ್ ು
ಂ ು ್ ೋ ೇ ಜ ನ ಾ
ಇಲಾಖೆಗಳು ಅಪೌಷ್ಠಿಕತೆ ಬಗ್ಗೆ ಸಾಕಷ್ಟು ಬಜೆಟ್‌ಗಳು, ಸಂಪನ್ಮೂಲಗಳನ್ನು ಆಯೋಜಿಸಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ರಾಜ್ಯಮಟ್ಟದಲ್ಲಿ ಆರೋಗ್ಯ ರಕ್ಷಣೆ ಮತ್ತು ಶುದ್ಧ ನೀರು, ಸಾಮಾಜಿಕ ಭದ್ರತೆ ಮತ್ತು ಮೂಲಭೂತ ಸೌಕರ್ಯಗಳ ವ್ಯಾಪಕ ಶ್ರೇಣಿಯ ಅಗತ್ಯ ಸೇವೆಗಳು ಮತ್ತು ಸೌಲಭ್ಯಗಳನ್ನು ವಿಸ್ತರಿಸಬೇಕಾಗಿದೆ. ಸರಿಯಾದ, ಸಮಯೋಚಿತ ಮಾಹಿತಿ ಮತ್ತು ದತ್ತಾಂಶವನ್ನು ಕಡಿಮೆ ತೂಕದ ಮಕ್ಕಳ ಬಗ್ಗೆ ಮಾತ್ರವಲ್ಲದೆ ಅಧಿಕ ತೂಕದ ಮಕ್ಕಳ ಬಗ್ಗೆಯೂ ಸಂಗ್ರಹಿಸಿದ್ದಲ್ಲಿ ಸೂಕ್ತವಾದ ನೀತಿಗಳನ್ನು ವಿನ್ಯಾಸಗೊಳಿಸಬಹುದಾಗಿದೆ. ಹೆಚ್ಚಿನ ಅವಿಷ್ಕಾರಗಳು ಮತ್ತು ಪ್ರಾಯೋಗಿಕ ಕಾರ್ಯಕ್ರಮಗಳ ಮೂಲಕ 2022ರ ವೇಳೆಗೆ ಅಪೌಷ್ಠಿಕತೆ ಮುಕ್ತ ಭಾರತವನ್ನು ಸಾಧಿಸಬಹುದಾಗಿದೆ. ಪೋಷಣಾ ಅಭಿಯಾನವು ತಳಮಟ್ಟದ ಕುಟುಂಬಗಳಲ್ಲಿನ ಅಪೌಷ್ಠಿಕತೆಯನ್ನು ಹೋಗಲಾಡಿಸುವ ಜಾಗತಿಕ ಯೋಜನೆಯಾಗಿದೆ. ಈ ನಿಟ್ಟಿನಲ್ಲಿ ಶಾಲೆಗಳಲ್ಲಿ ವಿಭಿನ್ನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಮಕ್ಕಳಲ್ಲಿ ಅಪೌಷ್ಠಿಕತೆಯನ್ನು ಹೋಗಲಾಡಿಸಲು ನಡೆಸುವ ಸರ್ಕಾರದ ಪ್ರಯತ್ನಗಳಿಗೆ ಕೈ ಜೋಡಿಸೋಣ.

**ಶಾಲೆಗಳಲ್ಲಿ ಪೋಷಣಾ ಅಭಿಯಾನದ ಮೂಲಕ ಅಪೌಷ್ಟಿಕತೆಯ ಜಾಗೃತಿ:**

ಸಾರ್ವಜನಿಕ ಶಿಕ್ಷಣ ಇಲಾಖೆಯು ಕೂಡ ಅಪೌಷ್ಟಿಕತೆಯ ಜಾಗೃತಿ ಮೂಡಿಸುವ ಸಲುವಾಗಿ ಪೋಷಣಾ ಅಭಿಯಾನದ ಕಾರ್ಯಕ್ರಮವನ್ನು ಶಾಲೆಗಳಲ್ಲಿ ಆಚ–



# ಶಿಕ್ಷಣದಲ್ಲಿ ರಂಗಭೂಮಿ






ಡಾ. ಎಂ ಮಲ್ಲೇಶ, ನಾಟಕ ಶಿಕ್ಷಕರು, ಸ.ಪ್ರೌ.ಶಾ, ಚಳಮಟ್ಟಿ ತಾ. ಕಲಘಟಗಿ ಜಿ.ಧಾರವಾಡ

ಶಿಕ್ಷಣದಲ್ಲಿ ರಂಗಭೂಮಿ ಅಥವಾ ಥಿಯೇಟರ್ ಇನ್ ಎಜುಕೇಶನ್ ಎನ್ನುವುದು ಶೈಕ್ಷಣಿಕ ಪ್ರಕ್ರಿಯೆಗೆ ಸಹಾಯ ಮಾಡಲು ನಾಟಕ ಅಭ್ಯಾಸಗಳನ್ನು ಬಳಸುವ ಪ್ರಕ್ರಿಯೆ. ಥಿಯೇಟರ್ ಇನ್ ಎಜುಕೇಶನ್ (TIE) 1965 ರಲ್ಲಿ ಬ್ರಿಟನ್‌ನಲ್ಲಿ ಹುಟ್ಟಿಕೊಂಡಿತು ಮತ್ತು ಇಂದಿಗೂ ಮುಂದುವರೆದಿದೆ. ತಮ್ಮನ್ನು ತಾವು ಸವಾಲಿನ ಸಂದರ್ಭಗಳನ್ನು ತನಿಖೆ ಮಾಡಿ ಹೇಗೆ ಪರಿಹರಿಸಿಕೊಳ್ಳಬಹುದು ಎಂಬುದರ ಬಗ್ಗೆ ಅಲ್ಲಿನ ಮಕ್ಕಳ ಮತ್ತು ಯುವಜನರನ್ನು ತೊಡಗಿಸಿ ಪ್ರೋತ್ಸಾಹ ನೀಡಿತು. TIE ಮೂಲಕ ಮಕ್ಕಳು ಮತ್ತು ಯುವಕರು ತಮ್ಮದೇ ಆದ ಕಲಿಕೆಯಲ್ಲಿ ಉತ್ಸಾಹದಿಂದ ತೊಡಗುತ್ತಾರೆ ಮತ್ತು ಜಾಗೃತರಾಗುತ್ತಾರೆ. ಇದು ಮಕ್ಕಳಲ್ಲಿನ ವರ್ತನೆಯನ್ನು ಪ್ರತಿಬಿಂಬಿಸಲು ಮಗು ಗುರುತಿಸಲಾದ ಕಲಿಕೆಯ ಉದ್ದೇಶಗಳನ್ನು ಒಟ್ಟುಗೂಡಿಸಲು ಸಹಾಯಮಾಡುತ್ತದೆ. ಆಧುನಿಕ ನಾಟಕಗಳ ಸಂಕೀರ್ಣ ಭಾವವನ್ನು, ವೈಚಾರಿಕ ಸಂವಹನತೆಯನ್ನು ಶಿಕ್ಷಣಕ್ಕಾಗಿ ಅಭ್ಯಸಿಸುವ ರಂಗ ಶಿಕ್ಷಣದ ಅಗತ್ಯತೆಯನ್ನು ಮೊದಲ ಭಾರಿಗೆ ಕನ್ನಡದ ಸಂದರ್ಭದಲ್ಲಿ ಕಂಡುಕೊಂಡವರು ಶ್ರೀರಂಗ. ಇವರು ನಾಟಕ ತರಬೇತಿ ಶಿಬಿರಗಳನ್ನು ಆಯೋಜಿಸಿ ರಂಗ ತಂತ್ರಗಳನ್ನು ಶಿಕ್ಷಣದಲ್ಲಿ ಹೇಗೆ ಅಳವಡಿಸಿಕೊಳ್ಳಬಹುದು ಎಂಬುದನ್ನು ತಿಳಿಸುವುದರ ಮೂಲಕ ಕರ್ನಾಟಕದಲ್ಲಿ ರಂಗ ಶಿಕ್ಷಣದ ಪರಿಕಲ್ಪನೆಯ ಹುಟ್ಟಿಗೆ ಕಾರಣರಾದರು.

**ಶಾಲಾ ಶಿಕ್ಷಣದಲ್ಲಿ ಕಲಾ ಶಿಕ್ಷಣ ಪಠ್ಯಕ್ರಮ ಅಳವಡಿಕೆ:** ಪ್ರದರ್ಶನ ಕಲೆಗಳಾದ ನಾಟಕ, ನೃತ್ಯ, ಸಂಗೀತ ಕಲೆಗಳು ಮಕ್ಕಳ ಇಂದ್ರಿಯಗಳನ್ನು ಮೇಳೈಸಿ ಮನಸ್ಸಿಗೆ ಸಂತೋಷ ನೀಡುತ್ತವೆ. ಅಲ್ಲದೇ ಮಗುವಿನ ಬಲ ಮೆದುಳಿನ ಕಲಿಕೆಗೆ ಪ್ರೋತ್ಸಾಹಿಸುವುದರೊಂದಿಗೆ ಬೌದ್ಧಿಕವಾಗಿ, ಭಾವನಾತ್ಮಕವಾಗಿ, ಕ್ರಿಯಾತ್ಮಕವಾಗಿ, ಕೌಶಲಪೂರಿತವಾಗಿ ರೂಪಿಸುವಲ್ಲಿ ಈ ಪ್ರದರ್ಶನ ಕಲೆಗಳು ಸಹಕಾರಿಯಾಗುತ್ತವೆ. ಈ ಎಲ್ಲಾ ಕಾರಣಗಳಿಂದ ನಮ್ಮ ಸಾರ್ವಜನಿಕ ಶಿಕ್ಷಣ ಇಲಾಖೆ 1986ರಲ್ಲಿ ಪ್ರದರ್ಶನ ಕಲೆಗಳಾದ ನಾಟಕ, ನೃತ್ಯ, ಸಂಗೀತ ವಿಷಯಗಳನ್ನು ಶಿಕ್ಷಣದ ಚೌಕಟ್ಟಿನಲ್ಲಿ ಸೇರಿಸಿ ಒಂದು ಹೊಸ ಬದಲಾವಣೆಗೆ ನಾಂದಿಯಾಡಿದೆ. ಇದರ ಜೊತೆಗೆ ಪಠ್ಯವನ್ನು ಬೋಧಿಸಲು 1986, 1993, 2007ರಲ್ಲಿ ರಂಗ ಶಿಕ್ಷಕರ ನೇಮಕಾತಿ ನಡೆಸಿ ರಂಗ ಶಿಕ್ಷಣ ಬೋಧನೆ ಮಾಡಲು ಅವಕಾಶ ಮಾಡಿಕೊಟ್ಟಿದೆ.

ಇನ್ನು ಡಿ.ಎಸ್.ಇ.ಆರ್.ಟಿ ಸಂಸ್ಥೆಯು ರಂಗ ಶಿಕ್ಷಕರು ಈ ಪಠ್ಯವಸ್ತುವನ್ನು ಸರಳವಾಗಿ ಬೋಧನೆ ಮಾಡಲು 2018ರಲ್ಲಿ 10 ದಿನಗಳ ಕಾಲ ರಾಜ್ಯ ಮಟ್ಟದ ತರಬೇತಿಯನ್ನು ರಾಜ್ಯದ ಎಲ್ಲಾ ರಂಗ ಶಿಕ್ಷಕರಿಗೆ ನೀಡಿದೆಯಲ್ಲದೇ ನಾಟಕ ವಿಷಯವನ್ನು ಆಧರಿಸಿದ ಭಾವಸಿರಿ ಎಂಬ ಹೆಸರಿನಲ್ಲಿ ತರಬೇತಿ ಸಾಹಿತ್ಯವನ್ನು ಪುಸ್ತಕ ರೂಪದಲ್ಲಿ ರಚಿಸಿ ಶಿಕ್ಷಕರಿಗೆ ನೀಡಿ ಬೋಧನೆಗೆ ಅವಕಾಶ ಮಾಡಿಕೊಟ್ಟಿದೆ. ಹಾಗೆಯೇ ಕೋವಿಡ್–19ರ ಕಾಲದಲ್ಲಿ ವಿದ್ಯಾರ್ಥಿಗಳು ಕಲಾ ಶಿಕ್ಷಣದಿಂದ ವಂಚಿತರಾಗಬಾರದು ಎಂದು ಸಂವೇದ ವಿಡಿಯೋ ಪಾಠಗಳನ್ನು ತಯಾರಿಸಿ ವಿದ್ಯಾರ್ಥಿಗಳು ವೀಕ್ಷಣೆ ಮಾಡಲು ಅವಕಾಶ ಮಾಡಿಕೊಟ್ಟು ಮಕ್ಕಳ ಕಲಾ ಅಭಿರುಚಿಯನ್ನು ಪ್ರೋತ್ಸಾಹಿಸಿದೆ.

**ರಂಗಶಿಕ್ಷಣದ ಹೊಸ ನೆಲೆಗಳು:** ಪ್ರಸ್ತುತ ದಿನಗಳಲ್ಲಿ ಕಲೆಗಾಗಿ ಕಲೆ ಎನ್ನುವ ಪರಿಕಲ್ಪನೆ ಅಮುಖ್ಯವಾಗಿದ್ದು, ಕಲೆಯ ಜವಾಬ್ದಾರಿಕೆಯ ಹೊಸಹೊಸ ಚಿಂತನೆಗಳು, ಸಿದ್ಧಾಂತಗಳು, ಹೊಸ ನೆಲೆಗಳು ಅಸ್ತಿತ್ವಕ್ಕೆ ಬರುತ್ತಿವೆ ಹಾಗೂ ಬಂದಿವೆ ಈ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಚಿಂತನೆಯ ಹೊಸ ನೆಲೆಗಳಲ್ಲಿ ಮುಖ್ಯವಾಗಿ ಅನ್ವಯಿಕ ರಂಗಭೂಮಿ, ರಂಗಮುಖೇನ ಶಿಕ್ಷಣ, ಶಿಕ್ಷಣದಲ್ಲಿ ರಂಗಭೂಮಿ, ಕಲಾ ಸಂಯೋಜನೆ ಪ್ಲೇಬ್ಯಾಕ್ ಥಿಯೇಟರ್, ಆರೋಗ್ಯ ಶಿಕ್ಷಣದಲ್ಲಿ ನಾಟಕ (Drama in Health Education), ಶಿಕ್ಷಣದಲ್ಲಿ ನಾಟಕ (Drama in education), ಥಿಯೇಟರ್ ಫಾರ್ ಡೈಲಾಗ್ (TFD), ನಾಟಕ ಚಿಕಿತ್ಸೆ (Drama therapy), ಪ್ರಿಸನ್ ಥಿಯೇಟರ್, ಮ್ಯೂಜಿಯಂ ಥಿಯೇಟರ್ ಮುಖ್ಯವಾಗಿವೆ.

ಇಲಾಖೆ ನಡೆಸುವ ಪ್ರತಿಭಾ ಕಾರಂಜಿ, ಕಲೋತ್ಸವ ಹಾಗೂ ವಿಜ್ಞಾನ ನಾಟಕ ಸ್ಪರ್ಧೆಯಲ್ಲಿ ಸಕ್ರಿಯ ಭಾಗವಹಿಸುವಿಕೆ: ಇಲಾಖೆ ನಡೆಸುವ ಕಲಾ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿರುವುದನ್ನು ಕಾಣಬಹುದು ಅದರಲ್ಲೂ ರಂಗ ಕಲೆಯಲ್ಲಿ ವಿದ್ಯಾರ್ಥಿಗಳು ಅತ್ಯುನ್ನತ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಬೆಂಗಳೂರಿನ ಬಾಲಭವನ ನಡೆಸುವ ಕಲಾ ಸ್ಪರ್ಧೆಗಳಲ್ಲಿ ಅದರಲ್ಲೂ ನಾಟಕ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು ಭಾಗವಹಿಸಿ ರಾಜ್ಯಮಟ್ಟದ ಕಲಾಶ್ರೀ ಪ್ರಶಸ್ತಿ ಪಡೆದಿದ್ದಾರೆ.

**ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ:** ನಮ್ಮ ರಂಗಕಲಾ ಶಿಕ್ಷಕರು ಇಲ್ಲಿಯವರೆಗೂ 550ಕ್ಕೂ ಹೆಚ್ಚು ರಂಗ ಪ್ರದರ್ಶನಗಳನ್ನು ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಅಂಗವಾಗಿ ಸಿದ್ದಪಡಿಸಿ ತಾಲ್ಲೂಕು, ಜಿಲ್ಲೆ, ರಾಜ್ಯ, ರಾಷ್ಟ್ರ ಮಟ್ಟದ ವೇದಿಕೆಗಳಲ್ಲಿ ಪ್ರದರ್ಶನ ನೀಡಿ ಹಲವು ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ಕ್ಯಾಲಕೊಂಡ ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ರಂಗ ಕಲಾ ಶಿಕ್ಷಕ ಕೃಷ್ಣಮೂರ್ತಿ ತಾಳಿಕಟ್ಟೆ ಇವರ ಮಾರ್ಗದರ್ಶನದಲ್ಲಿ ರಾಷ್ಟ್ರಮಟ್ಟದ ಕಲೋತ್ಸವ ನಾಟಕ ಸ್ಪರ್ಧೆಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿ ಪ್ರಥಮ ಸ್ಥಾನ ಪಡೆದು 12 ಚಿನ್ನದ ಪದಕ ಪಡೆದ ಕೀರ್ತಿ ಆ ಶಾಲೆಯ ವಿದ್ಯಾರ್ಥಿ ಮತ್ತು ರಂಗಕಲಾ ಶಿಕ್ಷಕರಿಗೆ ಸಲ್ಲಬೇಕಾಗಿದೆ.

**ವಿಜ್ಞಾನ ನಾಟಕ ಸ್ಪರ್ಧೆ:** ಅದೇ ರೀತಿಯಾಗಿ ನಮ್ಮ ಇಲಾಖೆ ನಡೆಸುವ ವಿಜ್ಞಾನ ನಾಟಕ ಸ್ಪರ್ಧೆಯಲ್ಲಿ ಇಲ್ಲಿಯವರೆಗೂ 250ಕ್ಕೂ ಹೆಚ್ಚು ಆರೋಗ್ಯ, ಪರಿಸರ, ವಿಜ್ಞಾನಿಗಳ ಜೀವನ ಮತ್ತು ಸಾಧನೆ, ವೈಜ್ಞಾನಿಕ ಮನೋಭಾವ ಮುಂತಾದ ಕಥಾವಸ್ತುಗಳನ್ನು ಒಳಗೊಂಡ ವಿಜ್ಞಾನ ನಾಟಕಗಳ ರಂಗ ಪ್ರದರ್ಶನಗಳನ್ನು ಜಿಲ್ಲಾ, ವಿಭಾಗ, ರಾಜ್ಯ, ದಕ್ಷಿಣ ಭಾರತಮಟ್ಟದಲ್ಲಿ ಪ್ರದರ್ಶಿಸಿ ಜಾಗೃತಿ ಮೂಡಿಸಿದ್ದಾರೆ. ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲೂಕಿನ ಮಾವಿನಕಟ್ಟೆ ಸರಕಾರಿ ಪ್ರೌಢಶಾಲೆಯ ಮಕ್ಕಳು ಸತತ ಮೂರು ಬಾರಿ ದಕ್ಷಿಣ ಭಾರತ ಮಟ್ಟದ ಸ್ಪರ್ಧೆಯಲ್ಲಿ ಸ್ಪರ್ಧಿಸಿ ವೆಂಕಟೇಶ್ವರ. ಕೆ ರಂಗಕಲಾ ಶಿಕ್ಷಕರು ಇವರ ಮಾರ್ಗದರ್ಶನದಲ್ಲಿ ವಿಜ್ಞಾನ ನಾಟಕವನ್ನು ರಂಗದ ಮೇಲೆ ಯಶಸ್ವಿ ಪ್ರದರ್ಶನ ನೀಡಿ ಶಾಲೆ ಮತ್ತು ಇಲಾಖೆಗೆ ಹೆಸರು ತಂದಿದ್ದಾರೆ.

**ರಾಷ್ಟ್ರೀಯ ಪಾತ್ರಾಭಿನಯ:** ಅದೇ ರೀತಿಯಾಗಿ ಪ್ರತಿ ವರ್ಷ ನಡೆಯುವ ರಾಷ್ಟ್ರೀಯ ಪಾತ್ರಾಭಿನಯ ಸ್ಪರ್ಧೆಯಲ್ಲಿ ಇಲ್ಲಿಯವರೆಗೂ 250ಕ್ಕೂ ಹೆಚ್ಚು ನಾಟಕಗಳನ್ನು ಪ್ರದರ್ಶಿಸಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿದ್ದಾರೆ ಎಂದು ಹೇಳಿಕೊಳ್ಳಲು ಹೆಮ್ಮೆಯಾಗುತ್ತದೆ. ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನ ನಾವಳ್ಳಿ ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ರಂಗ ಶಿಕ್ಷಕರಾದ ರಾಘವೇಂದ್ರಾಚಾ–ರಿಯವರ ಮಾರ್ಗದರ್ಶನದಲ್ಲಿ ರಾಷ್ಟ್ರಮಟ್ಟದ ಪಾತ್ರಾಭಿನಯ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರದರ್ಶನ ನೀಡಿದ್ದಾರೆ. ಈ ಎಲ್ಲಾ ಬೆಳವಣಿಗೆಯನ್ನು ಕಂಡ ನಮ್ಮ ಇಲಾಖೆ ರಂಗ ಶಿಕ್ಷಕರ ಸೇವೆಯನ್ನು ಮೆಚ್ಚಿ 6 ಜನರಿಗೆ ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ, ಮೂರು ಜನ ಶಿಕ್ಷಕರಿಗೆ ರಾಜ್ಯಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.





**ತರಗತಿಯಲ್ಲಿ ನಾಟಕವನ್ನು ಸಂಯೋಜಿಸುವ ವಿಧಾನಗಳು:** ಶೈಕ್ಷಣಿಕ ಕ್ಷೇತ್ರದಲ್ಲಿ ಕಲೆಗಳ ಅಳವಡಿಕೆಯಿಂದ ವಿದ್ಯಾರ್ಥಿಗಳ ಶೈಕ್ಷಣಿಕ, ಸಾಮಾಜಿಕ ಮತ್ತು ಭಾವನಾತ್ಮಕ ಫಲಿತಾಂಶಗಳ ಮೇಲೆ ಗಮನಾರ್ಹ ಪರಿಣಾಮ ಬೀರುತ್ತದೆಯಲ್ಲದೇ ಹೊಸ ವಿಷಯಗಳ ಬಗ್ಗೆ ಯೋಚಿಸುವಂತೆ ಮಾಡುತ್ತದೆ ಮತ್ತು ಅವರ ಶಾಲೆಯ ಕಾರ್ಯಕ್ರಮಗಳು, ತರಗತಿಗಳು ಮತ್ತು ಚಟುವಟಿಕೆಗಳನ್ನು ಶಾಲೆಯಲ್ಲಿ ಆಸಕ್ತಿ ಮೂಡಿಸುತ್ತವೆ ಎಂದು ಒಪ್ಪಿಕೊಳ್ಳುವ ಸಾಧ್ಯತೆ ಹೆಚ್ಚು. ಆದುದರಿಂದ ತರಗತಿಯಲ್ಲಿ ನಾಟಕವನ್ನು ವಿವಿಧ ರೀತಿಯಲ್ಲಿ ಸಂಯೋಜಿಸಬಹುದಾಗಿದೆ.

1. ರಂಗಾಟಗಳು 2. ಆಶುವಿಸ್ತರಣೆ ಮತ್ತು ತಾಲೀಮು 3. ರಂಗಗಾಯನ 4. ಪದ್ಯವಾಚನ 5. ಕಥಾವಾಚನ 6. ಪಾತ್ರಾಭಿನಯ ಮತ್ತು ಚರ್ಚೆ 7. ಪಠ್ಯ ನಾಟಕಗಳ ಪ್ರದರ್ಶನ 8. ನಾಟಕದ ಮೂಲಕ ಸಾಮಾಜಿಕ ಮತ್ತು ಶೈಕ್ಷಣಿಕ, ಪರಿಸರ ಜಾಗೃತಿ 9. ಸಂವಾದವನ್ನು ನಿರ್ವಹಿಸುವುದು 10. ಓದುಗರ ರಂಗಮಂಚ ನಿರ್ಮಾಣ 11. ಒಂದು ದೃಶ್ಯವನ್ನು ವೀಕ್ಷಣೆ ಮಾಡಿ ಸಂವಾದವನ್ನು ಬರೆಯುವುದು 12. ಕಠಿಣ ವಿಷಯಗಳನ್ನು ನಾಟಕ ರೂಪಕ್ಕೆ ಅಳವಡಿಸಿ ಅರ್ಥೈಸುವಿಕೆ. 14. ರಂಗ ಧ್ವನಿ ಚಿಕಿತ್ಸೆ (ಧ್ವನಿ–ಭಾಷೆ)

**ರಂಗಾಟಗಳು:** ಸಮಾಜದ ಯಾವುದೇ ಸ್ತರದ ಮಗು ಏಕಾಂಗಿಯಾಗಿ ಕಲಿಯುವುದಕ್ಕಿಂತ ಸಮೂಹದ ನಡುವೆ ಕಲಿಯಲು ಹೆಚ್ಚು ಇಷ್ಟಪಡುವುದರೊಂದಿಗೆ ಅನುಕರಿಸಲು ಪ್ರಯತ್ನಿಸುತ್ತದೆ. ಇದೇ ರೀತಿ ರಂಗಭೂಮಿಯಲ್ಲಿ ನಟನೊಬ್ಬ ಅಭಿನಯಕ್ಕೆ ತಯಾರಿ ನಡೆಸಲು ರಂಗಾಟಗಳನ್ನು ಸಾಧನಗಳಾಗಿ ಬಳಸಿಕೊಳ್ಳುವುದನ್ನು ಕಾಣಬಹುದು. ಈ ಒಂದು ಪ್ರಕ್ರಿಯೆ ಶಿಕ್ಷಣದ ಕಲಿಕಾವಿಧಾನದಲ್ಲಿಯೂ ಆಟಗಳು ಪರಿಣಾಮಕಾರಿ ಸಾಧನವಾಗಿ ಬಳಕೆಯಾಗುತ್ತಿವೆ. ವಿದ್ಯಾರ್ಥಿ ಶಾಲೆಯ ನಿಯಮಾವಳಿಗಳ ಶಿಸ್ತಿಗೆ ಒಳಪಟ್ಟು ವಿಶಾಲವಾದ ಮನಸ್ಸು ಕುಬ್ಜವಾಗುತ್ತದೆ ಈ ಸಂಕುಲದಿಂದ ಹೊರಬರಲು ಇಂದು ಶಿಕ್ಷಕರ ಸಮ್ಮುಖದಲ್ಲಿ ಸಮೂಹ ಆಟಗಳಲ್ಲಿ ಭಾಗವಹಿಸಿ ಸಂಕೋಚ, ಹಿಂಜರಿಕೆ, ಕೀಳರಿಮೆಯನ್ನು ಕಡಿಮೆ ಮಾಡಿಕೊಂಡು ಆತ್ಮವಿಶ್ವಾಸ, ಕಲ್ಪನಾಶಕ್ತಿ, ಗಮನ ಕೇಂದ್ರೀಕರಣ ಮತ್ತು ಭಾಗವಹಿಸುವಿಕೆಯಂತಹ ಕೌಶಲಗಳನ್ನು ಕಲಿಯುವುದರೊಂದಿಗೆ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ರಂಗಾಟಗಳು ಸಹಕಾರಿಯಾಗುತ್ತವೆ. ಉದಾ: ಪರಿಚಯ ಆಟ, ಧ್ವನಿ ಮತ್ತು ಚಲನೆಯ ಆಟ, ಗುಂಪು ಕನ್ನಡಿ ಆಟ, ಸಂಖ್ಯಾ ಆಟ, ಮನರಂಜನಾ ಆಟಗಳು.

**ರಂಗ ವ್ಯಾಯಾಮಗಳು:** ಶಾಲೆಯ ಒಂದು ತರಗತಿಗೆ ಬರುವ ಮಕ್ಕಳು



ಒಂದೇ ಗುಂಪಾಗಿ ಸೇರುತ್ತಾರಾದರೂ, ಪ್ರತಿ ಮಗುವಿನಲ್ಲಿಯೂ ಬೇರೆ ಬೇರೆ ರೀತಿಯ ಗ್ರಹಿಕೆಯ ಸ್ತರಗಳು ಇರುತ್ತವೆ. ಎಲ್ಲರಿಗೂ ಒಂದೇ ರೀತಿಯ ಬೋಧನಾ ಮಂತ್ರ ಎಂಬ ಶಿಕ್ಷಕರ ತಂತ್ರ ಫಲ ನೀಡುವುದಿಲ್ಲ. ಕೆಲವು ವಿದ್ಯಾರ್ಥಿಗಳಿಗೆ ಸೈದ್ಧಾಂತಿಕ ಅಂಶಗಳ ಗ್ರಹಿಕೆ ಸುಲಭವಾದರೆ ಮತ್ತೆ ಕೆಲವು ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಅಂಶಗಳ ಗ್ರಹಿಕೆ ಸುಲಭವಾಗುತ್ತದೆ. ಅಷ್ಟೇ ಅಲ್ಲದೇ ವಿದ್ಯಾರ್ಥಿಯಲ್ಲಿನ ಕೀಳರಿಮೆ, ಅಂಜಿಕೆ ಹೋಗಲಾಡಿಸಲು ಹಾಗೂ ಏಕಾಂಗಿತನದ ಮನೋಭಾವದ ವಿದ್ಯಾರ್ಥಿಯನ್ನು ಗುಂಪಿನೊಂದಿಗೆ ಬೆರೆಯುವಂತೆ ಮಾಡಲು ಯಾವುದೇ ವಿಚಾರಗಳನ್ನು ಏಕಾಂಗಿಯಾಗಿ ಅಭಿವ್ಯಕ್ತಿಸುವಂತೆ ಮಾಡಲು ಹಾಗೂ ಸೂಕ್ತ ದೈಹಿಕ, ಮಾನಸಿಕ, ಬೌದ್ಧಿಕ ಮಾರ್ಗದರ್ಶನವನ್ನು ನೀಡಲು ರಂಗವ್ಯಾಯಾಮಗಳು ಪರಿಣಾಮಕಾರಿಯಾಗಿ ಸಹಕಾರಿಯಾಗುತ್ತವೆ

**ರಂಗಧ್ವನಿ ಚಿಕಿತ್ಸೆ (ಧ್ವನಿ–ಭಾಷೆ):** ನಟನೊಬ್ಬನಿಗೆ ಶರೀರದಂತೆ ಶಾರೀರವೂ ಮುಖ್ಯ. ನಾಟಕದ ವಸ್ತುವನ್ನು ಅಥವಾ ಅದರ ಆಶಯವನ್ನು ತಿಳಿಸುವುದಕ್ಕೆ ಆಂಗಿಕ ಚಲನೆಗಳು ಮುಖ್ಯವಾದಂತೆ ನಟನಿಗೆ ಧ್ವನಿಯೂ ಸಹ ಬಹಳ ಮುಖ್ಯವಾದುದಾಗಿದೆ. ಅದರಂತೆ ಬೋಧನೆಯ ಪ್ರಕ್ರಿಯೆಗೆ ಬಂದರೆ ಇಲ್ಲಿ ಶಿಕ್ಷಕರಿಗೆ ಪಠ್ಯ ವಿಷಯವನ್ನು ವಿದ್ಯಾರ್ಥಿಗಳಿಗೆ ಸ್ಪಷ್ಟವಾಗಿ ಸರಳವಾಗಿ ಅರ್ಥೈಸಲು ಶರೀರದಂತೆ ಶಾರೀರವೂ ಮುಖ್ಯ. ಅಂದರೆ ಆಂಗಿಕ ಅಭಿವ್ಯಕ್ತಿಯ ಜೊತೆಗೆ ಧ್ವನಿಯ ಮೂಲಕ ಹೊರಡುವ ಸ್ಪಷ್ಟ ಉಚ್ಚಾರಣೆ, ಶೃತಿ, ಏರಿಳಿತ, ನಿಲುಗಡೆ, ಒತ್ತು, ಶೈಲಿ ಮುಂತಾದ ಧ್ವನಿ ಅಭಿವ್ಯಕ್ತಿಗಳು ಮುಖ್ಯವಾಗಿರುತ್ತವೆ. ಹಾಗೆಯೇ ವ್ಯಾಕರಣ ಬದ್ಧ ಜೋಡಣೆಯಿಂದ ಕೂಡಿದ ವಾಕ್ಯಗಳು ಅರ್ಥ ಪೂರ್ಣ ಪ್ರಕ್ರಿಯೆಗೆ ಒಳಪಡಬೇಕಾದರೆ ಪೂರ್ಣವಿರಾಮ, ಅರ್ಧವಿರಾಮ, ಪ್ರಶ್ನಾರ್ಥಕ ಚಿಹ್ನೆ, ಕಂಸ, ಇತ್ಯಾದಿ ಚಿಹ್ನೆಗಳನ್ನು ಸ್ಪಷ್ಟವಾಗಿ ಅರ್ಥೈಸಿಕೊಂಡು ಅಭ್ಯಾಸ ಮಾಡುವ ಮೂಲಕ ರಂಗ ಭಾಷೆಗೆ ಪ್ರಾಧಾನ್ಯತೆ ನೀಡುವುದು.

**ಆಶು ವಿಸ್ತರಣೆ ಮತ್ತು ತಾಲೀಮು:** ಆಶುವಿಸ್ತರಣೆ ಎನ್ನುವುದು ಸ್ಥಳದಲ್ಲೇ ಹಠಾತ್ ಸೃಜನಶೀಲತೆಯ ಸ್ವಾಭಾವಿಕ ಕ್ಷಣ ಎಂದು ಭಾವಿಸಬಹುದು. ಆಶುವಿಸ್ತರಣೆ ಮನಸ್ಸು, ದೇಹ ಮತ್ತು ಆತ್ಮವನ್ನು ಸ್ಫೂರ್ತಿಗೆ ತರಬಹುದಾದ ಕ್ರಿಯೆಯಾಗಿದ್ದು ಇದನ್ನು ಅನಾವರಣ ಮಾಡಲು ಯಾವುದೇ ಸಿದ್ಧತೆ ಮತ್ತು ತರಬೇತಿ ಅಗತ್ಯವಿಲ್ಲ. ಆಶುವಿಸ್ತರಣೆಯ ಸಂದರ್ಭದಲ್ಲಿ ಯಾವ ಕ್ರಿಯೆಯ ನಂತರ ಯಾವ ಕ್ರಿಯೆ ಮಾಡಬೇಕು ಎಂಬುದನ್ನು ಮೊದಲೇ ನಿರ್ಧಾರವಾಗಿರುವುದಿಲ್ಲ. ಆ ಸ್ಥಳದಲ್ಲಿಯೇ ಹುಟ್ಟುವ ಸನ್ನಿವೇಶಗಳನ್ನು ಜೋಡಿಸಿಕೊಂಡು ಮುಂದೆ ಸಾಗುತ್ತದೆ.

**ಶಾಲಾ ಪಠ್ಯಕ್ರಮದಲ್ಲಿ ನಾಟಕ ಕಲೆಯ ಅಳವಡಿಕೆಯಿಂದಾಗುವ ಪ್ರಯೋಜನಗಳು:** ನಾಟಕವು ಒಂದು ಪ್ರದರ್ಶನ ಕಲೆ, ಸ್ವ–ಅಭಿವ್ಯಕ್ತಿಗೆ ಒಂದು ಕಲಿಕೆಯ ವಿಧಾನವಾಗಿದೆ. ರಂಗ ಕಲೆಯನ್ನು ಶಾಲಾ ಪಠ್ಯಕ್ರಮದಲ್ಲಿ ಅಳವಡಿಸುವುದರಿಂದ ಹಲವು ಪ್ರಯೋಜನಗಳನ್ನು ಪಡೆಯಬಹುದು ಅವುಗಳಲ್ಲಿ ಮುಖ್ಯವಾಗಿ

- ನಾಟಕವು ಆತ್ಮವಿಶ್ವಾಸವನ್ನು ಬೆಳೆಸುತ್ತದೆ.
- ನಾಟಕವು ಏಕಾಗ್ರತೆಗೆ ಸಹಾಯ ಮಾಡುತ್ತದೆ.
- ಭಾಷೆ ಮತ್ತು ಸಂವಹನ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ನಾಟಕ ಸಹಾಯ ಮಾಡುತ್ತದೆ.
- ನಾಟಕವು ಮಕ್ಕಳನ್ನು ಸಹಕರಿಸುವಂತೆ ಪ್ರೋತ್ಸಾಹಿಸುತ್ತದೆ.
- ನಾಟಕವು ಮಕ್ಕಳಿಗೆ ತಮ್ಮ ಸುತ್ತಲಿನ ಪ್ರಪಂಚವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ .
- ನಾಟಕವು ಭಾವನಾತ್ಮಕ ಬುದ್ಧಿವಂತಿಕೆ ಮತ್ತು ಸೃಜನಶೀಲತೆಯನ್ನು ಅಭಿವೃದ್ಧಿಪಡಿಸುತ್ತದೆ.
- ನಾಟಕವು ಮನೋದೈಹಿಕ ಬೆಳವಣಿಗೆಗೆ ಸಹಾಯ ಮಾಡುತ್ತದೆ.
- ಮಕ್ಕಳು ಸಕಾರಾತ್ಮಕ ಅಭ್ಯಾಸಗಳು, ನಡವಳಿಕೆಗಳು ಮತ್ತು ವರ್ತನೆಗಳನ್ನು ಕಲಿಯುತ್ತಾರೆ.
- ಕಲಾ ಶಿಕ್ಷಣ ವಿದ್ಯಾರ್ಥಿಗಳು ತಂಡದ ಕೆಲಸಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ.
- ಕಲಾ ಶಿಕ್ಷಣವು ನಾಯಕತ್ವದ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.

ಮುಂದುವರೆಯುವುದು

